ಸಾಕ್ಷಿಯನ್ನು ದಿ: 21.09.2023 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-2

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-**

1. ನಾನು ಪದವಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈವರೆಗೆ ನಾನು ಯಾವ ನ್ಯಾಯಾಲಯದಲ್ಲೂ ಸಾಕ್ಷಿ ನುಡಿದಿಲ್ಲ. ವಾದಿಯು ನಮ್ಮ ಮನೆಯ ಪಕ್ಕದ ನಿವೇಶನವನ್ನು ಖರೀದ ಮಾಡಿದ ಕಾರಣ ಪರಿಚಯವಿರುತ್ತಾರೆ. ನನ್ನ ಅಕ್ಕ 2000 ನೇ ಇಸವಿಯಲ್ಲಿ ನಿವೇಶನ ಖರೀದಿ ಮಾಡಿರುತ್ತಾರೆ. ಸದರಿ ಕ್ರಯಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿಲ್ಲ. ಕ್ರಯ ಪತ್ರ ಬರೆಯುವ ಸಮಯದಲ್ಲಿ ನಾನು ಹಾಜರಿರಲಿಲ್ಲ. ಕ್ರಯ ಪತ್ರ ಬರೆಯುವ ಸಮಯದಲ್ಲಿ ಒಟ್ಟು ಆಸ್ತಿ 2 ಎಕರೆ ಇತ್ತು. ಎರಡು ಎಕರೆ ಜಮೀನು ಇದ್ದ ಬಗ್ಗೆ ನಾನು ಭೂ ಪರಿವರ್ತನೆ ದಾಖಲಾತಿ ನೋಡಿರುತ್ತೇನೆ. ಕ್ರಯದ ಮಾತುಕತೆಗೆ ನಾನು ಹಾಜರಿರಲಿಲ್ಲ. ನನ್ನ ಅಕ್ಕ ರೂ.72,000/- ಸಾವಿರಕ್ಕೆ ನಿವೇಶನ ಖರೀದಿ ಮಾಡಿರುತ್ತಾಳೆ. ಎರಡು ಎಕರೆ ಒಟ್ಟು ಜಮೀನನ್ನು ಭೂಪರಿವರ್ತನೆ ಮಾಡಿ ಮಾರಾಟ ಮಾಡಲಾಗಿದೆ ಎಂದರೆ ಸರಿ. ನನ್ನ ಅಕ್ಕ ದಕ್ಷಿಣದ ರಸ್ತೆಯನ್ನು ಬಿಡಿಸಿಕೊಡಿ ಎಂದು ಯಾವುದೇ ದೂರು ದಾಖಲು ಮಾಡಿಲ್ಲ. ದಕ್ಷಿಣ ದಿಕ್ಕಿಗೆ 18 ಅಡಿ ರಸ್ತೆಯಿದೆ ಎಂದು ನನ್ನ ಅಕ್ಕೆ ಯಾವುದೇ ದಾವೆ ದಾಖಲಿಸಿಲ್ಲ. 18 ಅಡಿ ರಸ್ತೆ ಬಿಡಲು ಪ್ರತಿವಾದಿ 1 ಮತ್ತು 2 ರವರಿಗೆ ನಾನೇ ಕೇಳಿರುತ್ತೇನೆ. ವಾದಿಯ ಕ್ರಯಪತ್ರ ನೋಡಿಲ್ಲ. ನಿಪಿ.1 ರ ಚೆಕ್ಕುಬಂದಿಯಲ್ಲಿ ದಕ್ಷಿಣಕ್ಕೆ ಕ್ರಯದಾರರು ಬಿಟ್ಟಿರುವ 18 ಅಡಿ ರಸ್ತೆಯೆಂದು ನಮೂದು ಮಾಡಲಾಗಿದೆ ಎಂದರೆ ಸರಿ. ವಾದಿಗೆ ದಕ್ಷಿಣ ದಿಕ್ಕೆಗೆ ತಿರುಗಾಡಲು 18 ಅಡಿ ರಸ್ತೆಯನ್ನು ಬಿಟ್ಟು ಕ್ರಯದಾರರು ನಿಪಿ.1 ನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿ. ಒಟ್ಟು 2 ಎಕರೆ ಜಮೀನಲ್ಲಿ ನಿವೇಶನಗಳನ್ನು ಕ್ರಯಕ್ಕೆ ಪಡೆದ ಎಲ್ಲರೂ ಈಗ ಮನೆ ಕಟ್ಟಿಕೊಂಡಿರುತ್ತಾರೆಂದರೆ ಸರಿ. ಸದರಿ ನಿವೇಶನಗಳನ್ನು ಮಾಲೀಕರುಗಳು ರಸ್ತೆ ಕಾಯ್ದಿರಿಸದೆ ಎಲ್ಲರೂ ಮನೆ ಕಟ್ಟಿರುತ್ತಾರೆಂದರೆ ಸರಿ. ವಾದಿ ಕ್ರಯಕ್ಕೆ ಪಡೆದಾಗ 18 ಅಡಿ ರಸ್ತೆ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಆಗ ಯಾರೂ ಮನೆ ಕಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ವಾದಿ ಕ್ರಯಕ್ಕೆ ಪಡೆದ 15 – 20 ವರ್ಷ ಸದರಿ 18 ಅಡಿ ರಸ್ತೆ ಅಸ್ಥಿತ್ವದಲ್ಲಿತ್ತು. ನನ್ನ ಅಕ್ಕನ ನಿವೇಶನದ ಚೆಕ್ಕುಬಂದಿ ಪೂರ್ವಕ್ಕೆ ವಾದಿಯ ಆಸ್ತಿ, ಪಶ್ಚಿಮಕ್ಕೆ ಕ್ರಯದಾರರ ಉಳಿಕೆ ಜಮೀನು, ಉತ್ತರಕ್ಕೆ ತೆಂಕಳ್ಳಿ ಮಾದಯ್ಯರವರು ಜಮೀನು, ದಕ್ಷಿಣಕ್ಕೆ ರಸ್ತೆ. ನನ್ನ ಅಕ್ಕ ಹಾಗೂ ವಾದಿಯ ಆಸ್ತಿಯ

ದಕ್ಷಿಣಕ್ಕೆ ರಸ್ತೆಯಿರುತ್ತದೆ ಎಂದರೆ ಸರಿ. ದಕ್ಷಿಣದ ರಸ್ತೆಯಲ್ಲಿ ಎಲ್ಲಾ ವಾಹನಗಳು ಓಡಾಡುತ್ತಿದ್ದವು ಎಂದರೆ ಸರಿ. ವಾದಿಯ ನಿರ್ಲಕ್ಷದಿಂದ ದಾವಾ ಆಸ್ತಿಯ ಅಕ್ಕಪಕ್ಕದ ಮಾಲೀಕರು ರಸ್ತೆಯನ್ನು ಒತ್ತುವರಿ ಮಾಡಿರುತ್ತಾರೆಂದರೆ ಸರಿಯಲ್ಲ. ವಾದಿ ಕೇಳಿರುವ 18 ಅಡಿ ರಸ್ತೆ ಈಗ ಅಸ್ಥಿತ್ವದಲ್ಲಿಲ್ಲ ಅದನ್ನು ಬೇರೆಯವರು ಒತ್ತುವರಿ ಮಾಡಿಕೊಂಡು ಈಗಾಗಲೇ ಮನೆಗಳನ್ನು ನಿರ್ಮಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ